**ಹಿರಿಯ ಶ್ರೇಣಿ ದಿವಾಣಿ ನ್ಯಾಯಾಲಯ ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ, ಹೊನ್ನಾವರ**

**ಸಿ.ಸಿ. ನಃ 557/2024**

ಫಿರ್ಯಾದಿಃ ಸರಕಾರದ ಪರವಾಗಿ
ಪೋಲಿಸ್ ವೃತ್ತ ನಿರೀಕ್ಷಕರು,
ಭಟ್ಕಳ ಗ್ರಾಮಾಂತರ ವೃತ್ತ (ಉ.ಕ.)

**-ವಿರುದ್ಧ-**

ಆರೋಪಿಃ

1. ಜಾಫರ ಸಾದಿಕ್ ಮಹಮ್ಮದ್ ಅಬಿವುಲ್ಲಾ ಶೇಖ್ (ವಿಭಜಿತ ಪ್ರಕರಣ ದಾಖಲಾಗಿದೆ)

2. ಹಜರತ ಅಲಿ ತಂದೆ ಮೆಹಬೂಬ ಸಾಬ್ ಕಲ್ಕೇರೆ,
ವಯಸ್ಸುಃ 24 ವರ್ಷಗಳು,
ಉದ್ಯೋಗಃ ಪೆಂಟಿಂಗ್ ಕೆಲಸ,
ಸಾಕೀನಃ ಕೆ.ಇ.ಬಿ. ಕೊನೆವಾಡ, ಕಾರವಾರ.

3. ಮಹಮ್ಮದ್ ಖಾದೀರ್ ತಂದೆ ಮಹಮ್ಮದ್ ಮೀಯಾ ಸುತಾರ್,
ವಯಸ್ಸುಃ 28 ವರ್ಷಗಳು,
ಉದ್ಯೋಗಃ ಟೈಲ್ಸ ಕೆಲಸ,
ಸಾಕೀನಃ ನಗೀನಾಸ್ಟ್ರೀಟ್ ಮಾಂಟೆಗ್ ಗ್ರೌಂಡ ಹತ್ತಿರ,
ಮುಗ್ದುಮ್ ಕಾಲೋನಿ, ಭಟ್ಕಳ.

4. ಅಕ್ರಮ ಸಯ್ಯದ್ ತಂದೆ ಮಹಮ್ಮದ್ ಹುಸೇನ್ (ವಿಭಜಿತ ಪ್ರಕರಣ ದಾಖಲಾಗಿದೆ)

5. ಮಹಮ್ಮದ್ ಮುಜಾಮಿಲ್ ತಂದೆ ನಿಸಾರ ಅಹಮ್ಮದ್ (ವಿಭಜಿತ ಪ್ರಕರಣ ದಾಖಲಾಗಿದೆ)

6. ಇಬ್ರಾಹಿಂ ತಂದೆ ದಾವೂದ್ ಸಾಬ ಚೋಪದಾರ,
ವಯಸ್ಸುಃ 20 ವರ್ಷಗಳು,
ಉದ್ಯೋಗಃ ಮೆಕ್ಯಾನಿಕಲ್ ಕೆಲಸ,
ಸಾಕೀನಃ ಬಸ್ಸ ಡಿಪೋ ಹತ್ತಿರ,
ಹಬ್ಬೋಡ, ಕಾರವಾರ.

7. ಜವೂರ್ ತಂದೆ ರಫೀಕ್ ಮಂಡಲ್
ವಯಸ್ಸುಃ 24 ವರ್ಷಗಳು,
ಸಾಕೀನಃ ಸಕೀನಾ ಕಾಂಪ್ಲೆಕ್ಸ ಮುನ್ಸಿಪಾಲಿಟಿ ಹತ್ತಿರ,
ತಾಲೂಕು ಭಟ್ಕಳ.

**ದೋಷಾರೋಪಣೆ**

ಶ್ರೀ ಬಿ.ಸಿ. ಚಂದ್ರಶೇಖರ್, ಹಿರಿಯ ಶ್ರೇಣಿ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯಾದ ನಾನು 2, 3, 6 ಮತ್ತು 7 ನೇ ಆರೋಪಿತರಾದ ನಿಮ್ಮ ಮೇಲೆ ಈ ಕೆಳಕಂಡ ದೋಷಾರೋಪಣೆಗಳನ್ನ ಹೊರೆಸುತ್ತಿದ್ದೇನೆ.

1. ಮೊದಲನೆಯದಾಗಿ ದಿನಾಂಕಃ 30-04-2024 ರಂದು ಬೆಳಗಿನ ಜಾವ 02-00 ರ ಸಮಯದಲ್ಲಿ ಮಂಕಿ ಪೋಲೀಸ್ ಠಾಣಾ ಸರಹದ್ದಿನಲ್ಲಿ 1, 3 ಮತ್ತು 4 ನೇ ಆರೋಪಿತರು ಸೇರಿಕೊಂಡು ಸ್ಕೂಟರ್ ನಂ. ಕೆಎ- 47/ಡಬ್ಲ್ಯೂ-0016 ನೇದರಲ್ಲಿ ಹಾಗೂ 2, 5 ಮತ್ತು 6 ನೇ ಆರೋಪಿತರು ಮಂಕಿಯಲ್ಲಿರುವ ಚಾಸಾ-1 ರವರಾದ ಅಣ್ಣಪ್ಪ ಪ್ರಭಾಕರ ಶೇಟ್ ರವರ ಶ್ರೀ ಕಾಮಾಕ್ಷಿ ಜ್ಯೂವೆಲ್ಲರಿ ಅಂಗಡಿಗೆ ಬಂದು ಆರೋಪಿತರು ತಂದಿದ್ದ ಕಬ್ಬಿಣದ ರಾಡ್ ಮತ್ತು ಗ್ಲಾಂಡರ್ ಕಟಿಂಗ್ ಮಷಿನನ್ನು ಬಳಸಿಕೊಂಡು ಅಂಗಡಿಯ ಶೆಟರ್ಸನ ಚಾವಿಯನ್ನು ಕಟ್ ಮಾಡಿ, ಕಬ್ಬಿಣದ ರಾಡ್ ನಿಂದ ಮೀಟಿ, ಶಟರ್ಸನ್ನು ತೆಗೆದು ಕಳ್ಳತನ ಮಾಡುವ ಉದ್ದೇಶದಿಂದ ಅಕ್ರಮ ಪ್ರವೇಶ ಮಾಡಿದ್ದು, ಈ ಮೂಲಕ 2, 3 ಮತ್ತು 6 ನೇ ಆರೋಪಿತರು 1, 4, 5 ನೇ ಆರೋಪಿತರ ಜೊತೆಯಲ್ಲಿ ಭಾರತೀಯ ದಂಡ ಸಂಹಿತೆ ಕಲಂ 457 ರಡಿಯಲ್ಲಿ ಅಪರಾಧ ಎಸಗಿರುತ್ತೀರಿ ಎನ್ನುವ ದೋಷಾರೋಪಣೆಯನ್ನ ಹೊರಿಸುತ್ತಿದ್ದೇನೆ.

2. ಎರಡನೇಯದಾಗಿ, ಮೇಲ್ಕಂಡ ದಿನಾಂಕ, ಸ್ಥಳ ಹಾಗೂ ಸಮಯದಲ್ಲಿ ಮೇಲೆ ಹೇಳಿದ ವಿಷಯಕ್ಕೆ ಸಂಬಂಧಿಸಿದಂತೆ 1 ರಿಂದ 6 ನೇ ಆರೋಪಿತರೆಲ್ಲರೂ ಅಂಗಡಿಯ ಒಳಗೆ ಅಕ್ರಮ ಪ್ರವೇಶ ಮಾಡಿ ಸುಮಾರು 92 ಗ್ರಾಂ ತೂಕದ ಸುಮಾರು 4,60,000/- ಮೌಲ್ಯದ ಬಂಗಾರದ ಆಭರಣಗಳು ಮತ್ತು 5.227 ಗ್ರಾಂ ತೂಕದ ಸುಮಾರು 3.14920 ಮೌಲ್ಯದ ಬೆಳ್ಳಿಯ ಆಭರಣಗಳು ಮತ್ತು ವಸ್ತುಗಳನ್ನು ಕಳ್ಳತನ ಮಾಡಿಕೊಂಡು ಈ ಮೂಲಕ 2, 3 ಮತ್ತು 6 ನೇ ಆರೋಪಿತರು 1, 4, 5 ನೇ ಆರೋಪಿತರ ಜೊತೆಯಲ್ಲಿ ಭಾರತೀಯ ದಂಡ ಸಂಹಿತೆ ಕಲಂ 380 ರಡಿಯಲ್ಲಿ ಅಪರಾಧ ಎಸಗಿರುತ್ತೀರಿ ಎನ್ನುವ ದೋಷಾರೋಪಣೆಯನ್ನ ಹೊರಿಸುತ್ತಿದ್ದೇನೆ.

3. ಕೊನೆಯದಾಗಿ, ಮೇಲ್ಕಂಡ ದಿನಾಂಕ, ಸ್ಥಳ ಹಾಗೂ ಸಮಯದಲ್ಲಿ ಮೇಲೆ ಹೇಳಿದ ವಿಷಯಕ್ಕೆ ಸಂಬಂಧಿಸಿದಂತೆ 1 ರಿಂದ 6 ನೇ ಆರೋಪಿತರು ಕಳ್ಳತನ ಮಾಡಿದ ಬಂಗಾರ, ಬೆಳ್ಳಿಯ ಆಭರಣಗಳನ್ನು 7 ನೇ ಆರೋಪಿತನಿಗೆ ನೀಡಿ, 7 ನೇ ಆರೋಪಿತನು ಕಳ್ಳತನ ಮಾಡಿರುವ ಬಂಗಾರ ಮತ್ತು ಬೆಳ್ಳಿಯ ಆಭರಣಗಳು ಎಂದು ಗೊತ್ತಿದ್ದರೂ ಸಹಾ ಕಳುವು ಮಾಲನ್ನು ಸ್ವೀಕರಿಸಿಕೊಂಡು ಬಂಗಾರದ ಆಭರಣಗಳನ್ನು ಬಂಗಾರ ಕರಗಿಸುವ ಮೂಸೆ ಮತ್ತು ಕಬ್ಬಿಣದ ಇಕ್ಕಳದ ಸಹಾಯದಿಂದ ಗ್ಯಾಸ್ ಸಿಲಿಂಡರನಲ್ಲಿ ಕರಗಿಸಿ ಎರಡು

ಬಂಗಾರದ ಗಟ್ಟಿ ಮಾಡಿ, 69.830 ಗ್ರಾಂ ತೂಕ ಇರುವ ಗಟ್ಟಿಯನ್ನು 3 ನೇ ಆರೋಪಿತನಿಗೆ ನೀಡಿ, ಉಳಿದ 24 ಗ್ರಾಂ ಬಂಗಾರದ ಗಟ್ಟಿಯನ್ನು ಮತ್ತು ಬೆಳ್ಳಿಯ ಆಭರಣಗಳನ್ನು ಮಾರಾಟ ಮಾಡಿ ಲಾಭ ಗಳಿಸುವ ಉದ್ದೇಶದಿಂದ ತನ್ನ ಬಳಿ ಇಟ್ಟುಕೊಂಡು ಈ ಮೂಲಕ 7 ನೇ ಆರೋಪಿತನು ಭಾರತೀಯ ದಂಡ ಸಂಹಿತೆ ಕಲಂ 411 ರಡಿಯಲ್ಲಿ ಅಪರಾಧ ಎಸಗಿರುತ್ತೀರಿ ಎನ್ನುವ ದೋಷಾರೋಪಣೆಯನ್ನ ಹೊರಿಸುತ್ತಿದ್ದೇನೆ.

ಮೇಲಿನ ಆಪಾದನೆಗಳಿಗೆ ಈ ನ್ಯಾಯಾಲಯದಲ್ಲಿ ವಿಚಾರಣೆಗೆ ಗುರಿಯಾಗಬೇಕೆಂದು ನಿರ್ದೇಶಿಸುತ್ತಿದ್ದೇನೆ.

**ಸಹಿ ಇದೆ.**

ದಿನಾಂಕಃ 14-08-2025 **(ಬಿ.ಸಿ. ಚಂದ್ರಶೇಖರ್)**

ಸ್ಥಳಃ ಹೊನ್ನಾವರ **ಹಿರಿಯ ಶ್ರೇಣಿ ದಿವಾಣಿ ನ್ಯಾಯಾಧೀಶರು ಮತ್ತು**

**ಪ್ರ.ದ.ನ್ಯಾ ದಂಡಾಧಿಕಾರಿಗಳು, ಹೊನ್ನಾವರ.**

**<u>ಹಿರಿಯ ಶ್ರೇಣಿ ದಿವಾಣಿ ನ್ಯಾಯಾಲಯ ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ, ಹೊನ್ನಾವರ</u>**

**<u>ಸಿ.ಸಿ. ನಂ. 557/2024</u>**

ಫಿರ್ಯಾದಿಃ ಸರಕಾರದ ಪರವಾಗಿ
ಪೋಲಿಸ್ ವೃತ್ತ ನಿರೀಕ್ಷಕರು,
ಭಟ್ಕಳ ಗ್ರಾಮಾಂತರ ವೃತ್ತ

**-ವಿರುದ್ಧ-**

ಆರೋಪಿಃ 2. ಹಜರತ ಅಲಿ ತಂದೆ ಮೆಹಬೂಬ ಸಾಬ್ ಕಲ್ಕೇರೆ
ವಯಸ್ಸುಃ 24 ವರ್ಷಗಳು,
ಉದ್ಯೋಗಃ ಪೆಂಟಿಂಗ್ ಕೆಲಸ
ಸಾಕೀನಃ ಕೆ.ಇ.ಬಿ. ಕೊನೆವಾಡ, ಕಾರವಾರ

**<u>ಆಪಾದನೆ</u>**

ಪ್ರಶ್ನೆ1. ನಿಮ್ಮ ಮೇಲೆ ಹೊರಿಸಲಾದ ದೋಷಾರೋಪಣೆಗಳನ್ನ ಕೇಳಿದಿರಾ? ಅದು ನಿಮಗೆ ತಿಳಿಯಿತೆ?

ಉತ್ತರಃ

ಪ್ರಶ್ನೆ2. ನೀವು ಸದ್ರಿ ದೋಷಾರೋಪಣೆಗಳನ್ನ ಒಪ್ಪಿಕೊಳ್ಳುತ್ತೀರೋ ಅಥವಾ ವಿಚಾರಣೆಯಾಗಬೇಕೇ?

ಉತ್ತರಃ

(ಸದರಿ ದೋಷಾರೋಪಣೆಗಳನ್ನ ಆರೋಪಿಗೆ ಗೊತ್ತಿರುವ ಕನ್ನಡ ಭಾಷೆಯಲ್ಲಿ ಓದಿ ವಿವರಿಸಿ ಹೇಳಲಾಯಿತು. ಪ್ರಶ್ನೆಗಳನ್ನ ಸಹ ಆರೋಪಿಗೆ ಗೊತ್ತಿರುವ ಕನ್ನಡ ಭಾಷೆಯಲ್ಲಿ ಓದಿ ವಿವರಿಸಿ ಹೇಳಿ ಅವರು ನೀಡಿದ ಉತ್ತರಗಳನ್ನ ನನ್ನ ಸ್ವಹಸ್ತಾಕ್ಷರಗಳಿಂದ ಬರೆದುಕೊಳ್ಳಲಾಗಿರುತ್ತದೆ)

ದಿನಾಂಕಃ 14-08-2025
ಸ್ಥಳಃ ಹೊನ್ನಾವರ

**(ಶ್ರೀ ಬಿ.ಸಿ. ಚಂದ್ರಶೇಖರ್)**
**ಹಿರಿಯ ಶ್ರೇಣಿ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ.**

**ಹಿರಿಯ ಶ್ರೇಣಿ ದಿವಾಣಿ ನ್ಯಾಯಾಲಯ ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ, ಹೊನ್ನಾವರ**
**ಸಿ.ಸಿ. ನಂ. 557/2024**

| | | |
|---|---|---|
| ಫಿರ್ಯಾದಿಃ | | ಸರಕಾರದ ಪರವಾಗಿ<br>ಪೋಲಿಸ್ ವೃತ್ತ ನಿರೀಕ್ಷಕರು,<br>ಭಟ್ಕಳ ಗ್ರಾಮಾಂತರ ವೃತ್ತ |

**-ವಿರುದ್ಧ-**

| | | |
|---|---|---|
| ಆರೋಪಿಃ | 3. | ಮಹಮ್ಮದ್ ಖಾದೀರ್ ತಂದೆ ಮಹಮ್ಮದ್ ಮೀಯಾ ಸುತಾರ್<br>ವಯಸ್ಸುಃ 28 ವರ್ಷಗಳು,<br>ಉದ್ಯೋಗಃ ಟೈಲ್ಸ ಕೆಲಸ<br>ಸಾಕೀನಃ ನಗೀನಾಸ್ಟ್ರೀಟ್ ಮಾಂಟೆಗ್ ಗ್ರೌಂಡ ಹತ್ತಿರ,<br>ಮುಗ್ದುಮ್ ಕಾಲೋನಿ, ಭಟ್ಕಳ |

**ಆಪಾದನೆ**

ಪ್ರಶ್ನೆ1. ನಿಮ್ಮ ಮೇಲೆ ಹೊರಿಸಲಾದ ದೋಷಾರೋಪಣೆಗಳನ್ನ ಕೇಳಿದಿರಾ? ಅದು ನಿಮಗೆ ತಿಳಿಯಿತೆ?

ಉತ್ತರಃ

ಪ್ರಶ್ನೆ2. ನೀವು ಸದ್ರಿ ದೋಷಾರೋಪಣೆಗಳನ್ನ ಒಪ್ಪಿಕೊಳ್ಳುತ್ತೀರೋ ಅಥವಾ ವಿಚಾರಣೆಯಾಗಬೇಕೇ?

ಉತ್ತರಃ

(ಸದರಿ ದೋಷಾರೋಪಣೆಗಳನ್ನ ಆರೋಪಿಗೆ ಗೊತ್ತಿರುವ ಕನ್ನಡ ಭಾಷೆಯಲ್ಲಿ ಓದಿ ವಿವರಿಸಿ ಹೇಳಲಾಯಿತು. ಪ್ರಶ್ನೆಗಳನ್ನ ಸಹ ಆರೋಪಿಗೆ ಗೊತ್ತಿರುವ ಕನ್ನಡ ಭಾಷೆಯಲ್ಲಿ ಓದಿ ವಿವರಿಸಿ ಹೇಳಿ ಅವರು ನೀಡಿದ ಉತ್ತರಗಳನ್ನ ನನ್ನ ಸ್ವಹಸ್ತಾಕ್ಷರಗಳಿಂದ ಬರೆದುಕೊಳ್ಳಲಾಗಿರುತ್ತದೆ)

ದಿನಾಂಕಃ 14-08-2025
ಸ್ಥಳಃ ಹೊನ್ನಾವರ

**(ಶ್ರೀ ಬಿ.ಸಿ. ಚಂದ್ರಶೇಖರ್)**
**ಹಿರಿಯ ಶ್ರೇಣಿ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ.**

**ಹಿರಿಯ ಶ್ರೇಣಿ ದಿವಾಣಿ ನ್ಯಾಯಾಲಯ ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ, ಹೊನ್ನಾವರ**
**ಸಿ.ಸಿ. ನಂ. 557/2024**

| | | |
|---|---|---|
| ಫಿರ್ಯಾದಿಃ | | ಸರಕಾರದ ಪರವಾಗಿ<br>ಪೋಲಿಸ್ ವೃತ್ತ ನಿರೀಕ್ಷಕರು,<br>ಭಟ್ಕಳ ಗ್ರಾಮಾಂತರ ವೃತ್ತ |

**–ವಿರುದ್ಧ–**

| | | |
|---|---|---|
| ಆರೋಪಿಃ | 6. | ಇಬ್ರಾಹಿಂ ತಂದೆ ದಾವೂದ್ ಸಾಬ ಚೋಪದಾರ<br>ವಯಸ್ಸುಃ 20 ವರ್ಷಗಳು,<br>ಉದ್ಯೋಗಃ ಮೆಕ್ಯಾನಿಕಲ್ ಕೆಲಸ<br>ಸಾಕೀನಃ ಬಸ್ಸ ಡಿಪೋ ಹತ್ತಿರ,<br>ಹಬ್ಬೋಡ, ಕಾರವಾರ |

**ಆಪಾದನೆ**

ಪ್ರಶ್ನೆ1. ನಿಮ್ಮ ಮೇಲೆ ಹೊರಿಸಲಾದ ದೋಷಾರೋಪಣೆಗಳನ್ನ ಕೇಳಿದಿರಾ? ಅದು ನಿಮಗೆ ತಿಳಿಯಿತೆ?

ಉತ್ತರಃ

ಪ್ರಶ್ನೆ2. ನೀವು ಸದ್ರಿ ದೋಷಾರೋಪಣೆಗಳನ್ನ ಒಪ್ಪಿಕೊಳ್ಳುತ್ತೀರೋ ಅಥವಾ ವಿಚಾರಣೆಯಾಗಬೇಕೇ?

ಉತ್ತರಃ

(ಸದರಿ ದೋಷಾರೋಪಣೆಗಳನ್ನ ಆರೋಪಿಗೆ ಗೊತ್ತಿರುವ ಕನ್ನಡ ಭಾಷೆಯಲ್ಲಿ ಓದಿ ವಿವರಿಸಿ ಹೇಳಲಾಯಿತು. ಪ್ರಶ್ನೆಗಳನ್ನ ಸಹ ಆರೋಪಿಗೆ ಗೊತ್ತಿರುವ ಕನ್ನಡ ಭಾಷೆಯಲ್ಲಿ ಓದಿ ವಿವರಿಸಿ ಹೇಳಿ ಅವರು ನೀಡಿದ ಉತ್ತರಗಳನ್ನ ನನ್ನ ಸ್ವಹಸ್ತಾಕ್ಷರಗಳಿಂದ ಬರೆದುಕೊಳ್ಳಲಾಗಿರುತ್ತದೆ)

ದಿನಾಂಕಃ 14–08–2025
ಸ್ಥಳಃ ಹೊನ್ನಾವರ

**(ಶ್ರೀ ಬಿ.ಸಿ. ಚಂದ್ರಶೇಖರ್)**
**ಹಿರಿಯ ಶ್ರೇಣಿ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ.**

**ಹಿರಿಯ ಶ್ರೇಣಿ ದಿವಾಣಿ ನ್ಯಾಯಾಲಯ ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ, ಹೊನ್ನಾವರ**
**ಸಿ.ಸಿ. ನಂ. 557/2024**

ಫಿರ್ಯಾದಿಃ ಸರಕಾರದ ಪರವಾಗಿ
ಪೋಲಿಸ್ ವೃತ್ತ ನಿರೀಕ್ಷಕರು,
ಭಟ್ಕಳ ಗ್ರಾಮಾಂತರ ವೃತ್ತ

**-ವಿರುದ್ಧ-**

ಆರೋಪಿಃ 7. ಜವೂರ್ ತಂದೆ ರಫೀಕ್ ಮಂಡಲ್
ವಯಸ್ಸುಃ 24 ವರ್ಷಗಳು,
ಸಾಕೀನಃ ಸಕೀನಾ ಕಾಂಪ್ಲೆಕ್ಸ ಮುನ್ಸಿಪಾಲಿಟಿ ಹತ್ತಿರ,
ತಾಲೂಕು ಭಟ್ಕಳ

**ಆಪಾದನೆ**

ಪ್ರಶ್ನೆ1. ನಿಮ್ಮ ಮೇಲೆ ಹೊರಿಸಲಾದ ದೋಷಾರೋಪಣೆಗಳನ್ನ ಕೇಳಿದಿರಾ? ಅದು ನಿಮಗೆ ತಿಳಿಯಿತೆ?

ಉತ್ತರಃ

ಪ್ರಶ್ನೆ2. ನೀವು ಸದ್ರಿ ದೋಷಾರೋಪಣೆಗಳನ್ನ ಒಪ್ಪಿಕೊಳ್ಳುತ್ತೀರೋ ಅಥವಾ ವಿಚಾರಣೆಯಾಗಬೇಕೇ?

ಉತ್ತರಃ

(ಸದರಿ ದೋಷಾರೋಪಣೆಗಳನ್ನ ಆರೋಪಿಗೆ ಗೊತ್ತಿರುವ ಹಿಂದಿ ಭಾಷೆಯಲ್ಲಿ ಓದಿ ವಿವರಿಸಿ ಹೇಳಲಾಯಿತು. ಪ್ರಶ್ನೆಗಳನ್ನ ಸಹ ಆರೋಪಿಗೆ ಗೊತ್ತಿರುವ ಹಿಂದಿ ಭಾಷೆಯಲ್ಲಿ ಓದಿ ವಿವರಿಸಿ ಹೇಳಿ ಅವರು ನೀಡಿದ ಉತ್ತರಗಳನ್ನ ನನ್ನ ಸ್ವಹಸ್ತಾಕ್ಷರಗಳಿಂದ ಬರೆದುಕೊಳ್ಳಲಾಗಿರುತ್ತದೆ)

ದಿನಾಂಕಃ 14-08-2025
ಸ್ಥಳಃ ಹೊನ್ನಾವರ

**(ಶ್ರೀ ಬಿ.ಸಿ. ಚಂದ್ರಶೇಖರ್)**
**ಹಿರಿಯ ಶ್ರೇಣಿ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ.**